ಒಳಾಡಳಿತ ಇಲಾಖೆ ಯೋಜನೆಗಳು

1236(1404); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿನವರೆಗೆ ರಾಯಭಾಗ ವಿಧಾನಸಭಾ ಕ್ಷೇತ್ರದಲ್ಲಿ ಒಳಾಡಳಿತ ಇಲಾಖೆಯ ವತಿಯಿಂದ ಅನುಷ್ಠಾನ ಮಾಡಿದ ಯೋಜನೆಗಳಾವುವು; ಅವುಗಳಿಗೆ ವೆಚ್ಚ ಮಾಡಿದ ಹಣವೆಷ್ಟು (ಯೋಜನಾವಾರು ವಿವರ ಒದಗಿಸುವುದು);

ಆ) ಈ ಕ್ಷೇತ್ರದ ಒಳಾಡಳಿತ ಇಲಾಖೆಯಲ್ಲಿ ಕೊರತೆ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು (ಪೊಲೀಸ್ ಠಾಣೆಗಳವಾರು ವಿವರ ಒದಗಿಸುವುದು)?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ಯೋಜನೆಗಳು ಮತ್ತು ವೆಚ್ಚ ಮಾಡಿದ ವಿವರ ಕೆಳಕಂಡಂತಿದೆ.

1) 2010–11 ನೇ ಸಾಲಿನಲ್ಲಿ ರಾಯಬಾಗ ಪೊಲೀಸ್ ಠಾಣೆಯ ಒಟ್ಟು 20 ವಸತಿ ಗೃಹಗಳನ್ನು ದುರಸ್ಥಿ ಮಾಡಲಾಗಿದ್ದು, ಅದರ ಒಟ್ಟು ಬಾಬ್ತು ₹ 4,97,810/– ಗಳು ವೆಚ್ಚವಾಗಿರುತ್ತದೆ.

2) ರಾಯಬಾಗ ಸಿಪಿಐ ಕಛೇರಿಯ ಹೊಸ ಕಟ್ಟಡವನ್ನು 2010–11ನೇ ಸಾಲಿನಲ್ಲಿ ನಿರ್ಮಿಸಲಾಗಿದ್ದು, ಇದರ ವೆಚ್ಚ ₹ 14.30 ಲಕ್ಷಗಳಾಗಿರುತ್ತವೆ.

ಆ) ಇಲಾಖೆಯಲ್ಲಿ ಕೊರತೆ ಇರುವ ಸಿಬ್ಬಂದಿಗಳ ಸಂಖ್ಯೆ ಮತ್ತು ಹುದ್ದೆಗಳ ವಿವರ ಕೆಳಕಂಡಂತಿರುತ್ತವೆ.

ಹುದ್ದೆಗಳು ವಿವರ	ಮಂಜೂರಾತಿ ಬಲ	ವಾಸ್ತವಿಕ ಬಲ	ಖಾಲಿ ಹುದ್ದೆಗಳು
ಪಿ.ಎಸ್.ಐ.	01	01	–
ಎ.ಎಸ್.ಐ.	03	03	–
ಹೆಚ್.ಸಿ.	10	08	02
ಪಿ.ಸಿ.	22	22	–
ಒಟ್ಟು	36	34	02

ಎರಡು ಹೆಚ್‌ಸಿ. ಹುದ್ದೆಗಳು ಖಾಲಿ ಇದ್ದು ಶೀಘ್ರವೇ ಸಿಪಿಸಿ ಹುದ್ದೆಯಿಂದ ಸಿಹೆಚ್‌ಸಿ ಹುದ್ದೆಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಪೊಲೀಸ್ ವಸತಿ ಗೃಹಗಳು

123(1406); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಯಭಾಗ ವಿಧಾನಸಭಾ ಕ್ಷೇತ್ರದಲ್ಲಿರುವ ಪೊಲೀಸ್ ವಸತಿ ಗೃಹಗಳೆಷ್ಟು; ಅವುಗಳು ಸುಸ್ಥಿತಿಯಲ್ಲಿವೆಯೆ; (ವಸತಿಗೃಹಗಳವಾರು ವಿವರ ಒದಗಿಸುವುದು);

ಆ) ಈ ಕ್ಷೇತ್ರದಲ್ಲಿ ಹೊಸ ಪೊಲೀಸ್ ವಸತಿಗೃಹಗಳ ನಿರ್ಮಾಣ ಮಾಡುವ ಪ್ರಸ್ತಾವನೆ ಸರಕಾರದ ಮುಂದಿದೆಯೆ; (ವಿವರ ನೀಡುವುದು)?

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಅ) ರಾಯಭಾಗ ವಿಧಾನಸಭಾ ಕ್ಷೇತ್ರದಲ್ಲಿ 3 ಪೊಲೀಸ್ ವಸತಿಗೃಹಗಳು ಇದ್ದು, ಅವುಗಳು ಸುಸ್ಥಿತಿಯಲ್ಲಿರುತ್ತವೆ. ಅಲ್ಲದೆ, 21 ಸಿಬ್ಬಂದಿಗಳಿಗೆ ಪಿಡಬ್ಲ್ಯೂಡಿ ಇಲಾಖೆಯ ವತಿಯಿಂದ 21 ವಸತಿಗೃಹಗಳನ್ನು ಹಂಚಿಕೆ ಮಾಡಲಾಗಿದೆ. ವಿವರ ಈ ಕೆಳಕಂಡಂತಿವೆ.

ಮಂಜೂರಾತಿ ಬಲ	ವಾಸ್ತವಿಕ ಬಲ	ಖಾಲಿ ಹುದ್ದೆ	ಲಭ್ಯವಿರುವ ವಸತಿಗೃಹ ಸಂಖ್ಯೆ	ಷರಾ
ಪಿಎಸ್‌ಐ–01	01	–	01	ಸಿಹೆಚ್‌ಸಿ–1 & ಎಎಸ್‌ಐ–2 ಪೊಲೀಸ್ ಇಲಾಖಾ ವಸತಿಗೃಹಗಳಿದ್ದು, ಸುಸ್ಥಿತಿಯಲ್ಲಿರುತ್ತದೆ ಮತ್ತು ಬಾಕಿ ಉಳಿದ ಸಿಪಿಸಿ & ಸಿಎಚ್‌ಸಿ ಹುದ್ದೆಗಳಿಗಾಗಿ–21 ಪಿಡ್ಲ್ಯೂಡಿ ಇಲಾಖೆಯವರು ಹಂಚಿಕೆ ಮಾಡಿರುತ್ತಾರೆ.
ಎಎಸ್‌ಐ–03	03	–	02	
ಸಿಎಚ್‌ಸಿ–10	08	02	–	
ಸಿಪಿಸಿ–22	22	–	–	